# ನೂರು: ಅನುಸಂಧಾನಕ್ಕೆ ಒಂದು ನೆಪ



ಸಾಂಸ್ಕೃತಿಕ ಲೋಕದ ಧೀಮಂತರನ್ನು ಅವರ ಜೀವನದ ನೂರು ವರ್ಷಗಳ ನೆಪದಲ್ಲಿ ನೆನಪಿಸಿಕೊಳ್ಳುವುದು ಒಂದು ಸತ್ಸಂಪ್ರದಾಯ. ಮುಖ್ಯವಾಗಿ ಸಾಮುದಾಯಿಕವಾಗಿ ಅವರ ಸ್ಮರಣೆ, ಅವರು ಕೊಟ್ಟ ಕೊಡುಗೆಯ ಚಾರಿತ್ರಿಕ ಮೌಲ್ಯಮಾಪನ, ಅವರ ಸಮಕಾಲೀನರ ಆಲೋಚನೆಗಳನ್ನು ಅದು ಪ್ರಭಾವಿಸಿದ ರೀತಿ, ಮುಂದಿನ ಪೀಳಿಗೆಗಳ ಸಂವೇದನೆಯನ್ನು ಅದು ಸ್ಪರ್ಶಿಸುವ ಕ್ರಮ, ಒಟ್ಟಾರೆ ಸಂಬಂಧಿತ ವಲಯಕ್ಕೆ ಅದು ನೀಡಿದ ಆಯಾಮ, ಅವರ ಅತ್ಯುತ್ತಮ ಸೃಷ್ಟಿಯ ಪುನರವಲೋಕನ– ಹೀಗೆ ನೂರು ಎಂಬ ನೆಪದಲ್ಲಿ ಹತ್ತಾರು ರೀತಿಗಳಲ್ಲಿ ಆ ಸಾಧಕರನ್ನು ಆಪ್ತವಾಗಿ ನೆನಪಿಸಿಕೊಳ್ಳಬಹುದು. ಒಬ್ಬ ವ್ಯಕ್ತಿಯ ಜೀವನದ ನೂರು ವರ್ಷಗಳ ಸ್ಮರಣೆ, ಇನ್ನೊಂದು ರೀತಿಯಲ್ಲಿ ಅವರು ಕೆಲಸ ಮಾಡಿದ ಆ ಕ್ಷೇತ್ರದ ಇತಿಹಾಸದ ಅಧ್ಯಾಯಗಳನ್ನು ಮತ್ತೆ ತಿರುವಿಹಾಕುವ ಸಂದರ್ಭವೂ ಆಗಬಹುದು. ಹಾಗೆ ನೋಡಿದರೆ ನೂರೆಂಬುದು ನೆಪ, ಪುನರ್‌ಮನನವೇ ನಿಜ.

'ಮಯೂರ'ಕ್ಕೆ ಇಂಥ ಸಾಂಸ್ಕೃತಿಕ ಮರುಪಯಣಗಳಲ್ಲಿ ಮೊದಲಿನಿಂದಲೂ ಆಸಕ್ತಿಯಿದೆ ಎಂಬುದು ಓದುಗರಾದ ನಿಮಗೆ ಗೊತ್ತೇ ಇದೆ. ಜೂನ್ ತಿಂಗಳ ಸಂಚಿಕೆಯಲ್ಲಿ ಕನ್ನಡದಲ್ಲಿ ನವ್ಯಸಾಹಿತ್ಯದ ಉದಯಕ್ಕೆ ಬೇಕಾದ ವಾಗ್ವಾದವನ್ನು ಆರಂಭಿಸಿದ ಪೇಜಾವರ ಸದಾಶಿವರಾಯರ ಸ್ಮರಣೆ ಇತ್ತು. 'ಕಾವ್ಯದಲ್ಲಿ ಬದಲಾದ ಜೀವನ ವಿಧಾನಕ್ಕೆ ತಕ್ಕಂತೆ ಹೊಸತನ ಬರಬೇಕು' ಎಂದು ಘೋಷಿಸಿದ ಅವರು ಕನ್ನಡಕ್ಕೆ ವಿಶ್ವಪ್ರಜ್ಞೆ ಮೂಡಿಸುವ ಹಂಬಲ ಹೊತ್ತಿದ್ದರು. ಈ ಸಂಚಿಕೆಯಲ್ಲಿ ಭಾರತೀಯ ಉಪಖಂಡದ ಪ್ರಮುಖ ಕಥೆಗಾರ ಸಾದತ್ ಹಸನ್ ಮಂಟೊ ಅವರ ರಾಜಕೀಯ –ಸೈದ್ಧಾಂತಿಕ ನಿಲುವುಗಳನ್ನು ಪ್ರಕಟಿಸುವ ಬರಹದ ಮೂಲಕ ಅವರ ಜನ್ಮ ಶತಮಾನೋತ್ಸವ ಆಚರಿಸಲಾಗಿದೆ.

ಮಹತ್ವದ ಅನುವಾದಗಳ ಮೂಲಕ ಕನ್ನಡಿಗರ ದೃಷ್ಟಿ ಮತ್ತು ಸೃಷ್ಟಿ ದಿಗಂತಗಳನ್ನು ವಿಸ್ತರಿಸಿದ ಅಹೋಬಲ ಶಂಕರ ಮತ್ತು ಎಚ್.ವಿ. ಸಾವಿತ್ರಮ್ಮ ಅವರನ್ನು ನೂರರ ನೆಪದಲ್ಲಿ ನೆನಪಿಸಿಕೊಳ್ಳುವ ಅವಕಾಶಗಳು ಈ ವರ್ಷ ಒದಗಿವೆ. ಮುಂದಿನ ಸಂಚಿಕೆಗಳಲ್ಲಿ ಅವರ ಕೊಡುಗೆಯ ಚರ್ಚೆ ಆಗಲಿದೆ. ಸಾಹಿತ್ಯವಲ್ಲದೆ ಇನ್ನಿತರ ಕ್ಷೇತ್ರಗಳ ಹಿರಿಯರ ಸಾಧನೆಯ ಅನುಸಂಧಾನಕ್ಕೂ 'ನೂರು' ಒಂದು ವಿಧಾನವಾಗಲಿದೆ.

–ಆರ್. ಪೂರ್ಣಿಮಾ